# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 730 |
| ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು |
| ಉತ್ತರಿಸುವ ದಿನಾಂಕ | 12.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | 2018-19 ರಿಂದ 2021-22 ನೇ ಸಾಲಿನವರೆಗೆ ಒಟ್ಟು 61 ಮುಜರಾಯಿ ದೇವಸ್ಥಾನಗಳಿಗೆ ಗರಿಷ್ಠ ಅರ್ಹ ಅನುದಾನಕ್ಕಿಂತ ಹೆಚ್ಚಾಗಿ ರೂ.3978.82 ಲಕ್ಷ ಅನುದಾನ ಹಾಗೂ 79 ದೇವಸ್ಥಾನಗಳಿಗೆ ವಿವಿಧ ಯೋಜನೆಗಳಡಿ (ಒಂದೇ ದೇವಸ್ಥಾನಕ್ಕೆ ವಿವಿಧ ಯೋಜನೆಗಳಡಿ ಅನುದಾನ ಮಂಜೂರು) ರೂ.513.33 ಲಕ್ಷ ಅನುದಾನ ಮಂಜೂರು ಮಾಡಿರುವುದು ನಿಜವೇ; | ಸಾಮಾನ್ಯ ಅನುದಾನ ಯೋಜನೆಯಡಿ ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 95 ಮುಅಬಿ 2010 ದಿನಾಂಕ:20.09.2010 ರಲ್ಲಿ ಖಾಸಗಿ ಸಂಸ್ಥೆಗಳಿಗೆ ಗರಿಷ್ಠ ರೂ.25.00 ಲಕ್ಷಗಳ ಹಾಗೂ ಮಠಗಳಿಗೆ ರೂ.50.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವ ಅವಕಾಶವಿದ್ದು, ವಿವಿಧ ದೇವಾಲಯಗಳ ಅಭಿವೃದ್ಧಿ/ಜೀರ್ಣೋದ್ಧಾರ ಕಾಮಗಾರಿಗಳಿಗಾಗಿ ಸುತ್ತೋಲೆಯ ಮಿತಿಗಿಂತ ಹೆಚ್ಚಾಗಿ ಅನುದಾನ ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗಿರುತ್ತದೆ.<br><br>ಈ ಸಂಬಂಧ ಪರಿಶೀಲಿಸಲಾಗಿದ್ದು, ಸರ್ಕಾರದ ಸುತ್ತೋಲೆಯನ್ನು 2010ನೇ ಸಾಲಿನಲ್ಲಿ ಆದೇಶಿಸಲಾಗಿದ್ದು, ಕಾಲಕ್ರಮೇಣ ನಿರ್ಮಾಣ ಕಾಮಗಾರಿಗಳ ವೆಚ್ಚವು ಹೆಚ್ಚಾಗಿರುವುದರಿಂದ ಸರ್ಕಾರವು ನಿಗಧಿಪಡಿಸಿರುವ ಮಿತಿಗಿಂತ ಹೆಚ್ಚಿನ ಅನುದಾನವನ್ನು ಖಾಸಗಿ ಸಂಸ್ಥೆಗಳು ಮತ್ತು ಮಠಗಳಿಗೆ ಮಂಜೂರಾತಿ ಆದೇಶ ಹೊರಡಿಸಲಾಗಿರುತ್ತದೆ.<br><br>ಹಾಗೆಯೇ ಒಟ್ಟು 79 ದೇವಸ್ಥಾನಗಳಿಗೆ ವಿವಿಧ ಯೋಜನೆಗಳಡಿ ರೂ.513.33 ಲಕ್ಷ ಮಂಜೂರು ಮಾಡಿರುವ ಬಗ್ಗೆ ಪರಿಶೀಲಿಸಲಾಗಿದ್ದು, ಸದರಿ 79 ದೇವಸ್ಥಾನಗಳ ಪೈಕಿ ರೂ.5.00 ಲಕ್ಷ ಮಿತಿಯೊಳಗೆ ಒಟ್ಟು 51 ದೇವಾಲಯಗಳಿಗೆ, ರೂ.6.00 ರಿಂದ ರೂ.10.00 ಲಕ್ಷದ ಮಿತಿಯೊಳಗೆ 21 ದೇವಾಲಯ/ಸಂಸ್ಥೆಗೆ ಹಾಗೂ ಉಳಿದ 07 ಸಂಸ್ಥೆಗಳಿಗೆ ಮಾತ್ರ ರೂ.10.00 ಲಕ್ಷ ಮೇಲ್ಪಟ್ಟು ಅನುದಾನವನ್ನು ಹಂಚಿಕೆ ಮಾಡಲಾಗಿದ್ದು, ಒಂದು ಯೋಜನೆಯಡಿ ಜೀರ್ಣೋದ್ಧಾರ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅನುದಾನದ ಕೊರತೆ ಉಂಟಾದಾಗ ಮಾತ್ರ ಮತ್ತೊಂದು ಯೋಜನೆಯಡಿ ಉಳಿದ ಕಾಮಗಾರಿಗಳಿಗಾಗಿ ಅನುದಾನವನ್ನು ಹಂಚಿಕೆ ಮಾಡಿಕೊಳ್ಳಲಾಗಿರುತ್ತದೆ. |
| ಆ) | ಹಾಗಿದ್ದಲ್ಲಿ, ಈ ಹಗರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು: ಮತ್ತು ಸದರಿ ಅನುದಾನವನ್ನು ಹಿಂಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮವೇನು? (ಮಾಹಿತಿ ನೀಡುವುದು) | ಅರ್ಹ ಧಾರ್ಮಿಕ ಸಂಸ್ಥೆಗಳಿಂದ ಅಭಿವೃದ್ಧಿ/ ಜೀರ್ಣೋದ್ಧಾರ ಕಾಮಗಾರಿಗಳ ಹಿತದೃಷ್ಠಿಯಿಂದ ಜಿಲ್ಲಾಮಟ್ಟದ ಆರಾಧನ / ಜಿಲ್ಲಾ ಸಮಿತಿಗಳಲ್ಲಿ ಅನುದಾನವನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗಿದ್ದು, ಸಂಬಂಧಪಟ್ಟ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿ/ ಜೀರ್ಣೋದ್ಧಾರ ಕಾಮಗಾರಿಗಳನ್ನು ನಿಯಮಾನುಸಾರ ನಿರ್ವಹಿಸಲಾಗಿರುತ್ತದೆ. |

ಸಂಖ್ಯೆ: ಕಂಇ 64 ಮುಸಪು 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು